ಮಧ್ಯಂತರ ಅರ್ಜಿ 2 ರ ಮೇಲೆ ಮಾಡಿದ ಆದೇಶದ ಮೇರೆಗೆ ಸಾಕ್ಷಿಯನ್ನು ಇಂದು ದಿಃ03-01-2023 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿ ವಿಚಾರಣೆಗೆ ಒಳಪಡಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಂ.ಬಿ.ಪಿ ವಕೀಲರಿಂದ.

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ . ನಾನು ಕೆ.ಎಸ್.ಆರ್.ಟಿ.ಸಿ ಯಲ್ಲಿ ಕಂಡಕ್ಟರ ಆಗಿ ಕೆಲಸ ಮಾಡುತ್ತಿದ್ದೆ. ನಾನು 2013 ರಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಾನು, ಪ್ರತಿವಾದಿ 2 ರಿಂದ 4 ರವರ ತಂದೆಯಾದ ನಾರಾಯಣ ಹಾಗೂ ಪ್ರತಿವಾದಿ ಸಂಖ್ಯೆ 5 ಮತ್ತು 6 ಅಣ್ಣ ತಮ್ಮಂದಿರು ಎಂದರೆ ಸರಿ. ಪ್ರತಿವಾದಿ ಸಂಖ್ಯೆ ಪಿಡಿಓ ಕಚೇರಿಯಲ್ಲಿ ಸುಪರಿಂಡೆಂಟೆಂಟ್ ಇರುತ್ತಾರೆ . 1996-1997 ರಲ್ಲಿ ಪ್ರತಿವಾದಿ ಸಂಖ್ಯೆ 5 ಶಿರಸಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ಸೂಚಿಸಲಾಗಿ ಸಾಕ್ಷಿಯು ಪ್ರತಿವಾದಿ ಸಂಖ್ಯೆ 5 ಶಿರಸಿಯಲ್ಲಿಯೇ ಕೆಲಸ ಮಾಡಿರುತ್ತಾರೆ ಆದರೆ ವರ್ಷ ಯಾವುದು ಎಂದು ಗೊತ್ತಿರುವುದಿಲ್ಲ . 1996-97 ರಲ್ಲಿ ಪ್ರತಿವಾದಿ ಸಂಖ್ಯೆ 5 ತಮ್ಮ ಮನೆಯಾದ ಮುನಿಸಿಪಲ್ ಅಸೆಸಮೆಂಟ ನಂಬರ ಬಿ/24 ನ್ನು ಬಾಡಿಗೆಗೆ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ . ನಾನು ಕೆಲಸಕ್ಕಾಗಿ ಬೇರೆ ಬೇರೆ ಊರುಗಳಿಗೆ ವರ್ಗಾವಣೆಗೊಂಡಾಗ ನನ್ನ ಮನೆಯಾದ ಮುನಿಸಿಪಲ್ ಅಸೆಸಮೆಂಟ ನಂಬರ ಬಿ/26 ರನ್ನು ಬಾಡಿಗೆ ಗೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಮ್ಮ ಮನೆ ಬಿ/26 ರಲ್ಲಿ ನಾನು ಬಂದು ಹೋಗುವುದು ಮಾಡುತ್ತಿದ್ದೆ ಅದರ ವ್ಯವಸ್ಥೆಯನ್ನು ನಾನು ನೋಡಿಕೊಂಡಿರುತ್ತೇನೆ.

ದಾವಾ ಆಸ್ತಿಗಳು ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ . ನಮ್ಮ ತಂದೆ ತೀರಿಕೊಂಡ ನಂತರ ದಾವಾ ಆಸ್ತಿಗಳು ನಮ್ಮ ಹಿರಿಯ ಅಣ್ಣನಾದ ಪ್ರತಿವಾದಿ ಸಂಖ್ಯೆ 1 ರವರ ಗಂಡ ಹಾಗೂ ಪ್ರತಿವಾದಿ ಸಂಖ್ಯೆ 2 ರಿಂದ 4 ರವರ ತಂದೆಯಾದ ನಾರಾಯಣ ಖಂಡೋಳ್ಕರ ಇವರ ಹೆಸರಿಗೆ ವರ್ಗಾವಣೆ ಯಾಗಿರುತ್ತದೆ ಎಂದರೆ ಸರಿ . ನಿಮ್ಮ ಹಿರಿಯ ಅಣ್ಣ ನಾದ ನಾರಾಯಣ ಇವರು ದಾವಾ ಆಸ್ತಿ ಗಳು ಅವರ ಹೆಸರಿಗೆ ವರ್ಗಾವಣೆಯಾದ ನಂತರ ಸದರಿ ದಾವಾ ಆಸ್ತಿಗಳ ದಾಖಲೆಗಳಲ್ಲಿ ನಿಮ್ಮ ಹೆಸರು ನಮೂದಾಗಬೇಕೆಂಬ ಉದ್ದೇಶದಿಂದ ನಿಮ್ಮ ಹಾಗೂ ಪ್ರತಿವಾದಿ ಸಂಖ್ಯೆ 5 ಮತ್ತು 6 ರವರ ಹೆಸರಿಗೆ ದಾವಾ ಆಸ್ತಿಗಳಿಗೆ

ಸಂಬಂಧಿಸಿದಂತೆ ದಿನಾಂಕ 01-02-2011 ರಂದು ನೊಂದಾಯಿತ ಭಕ್ಷಿಸ ಪತ್ರ ಬರೆದು ಕೊಟ್ಟಿರುತ್ತಾರೆ ಎಂದು ಸೂಚಿಸಲಾಗಿ ಸಾಕ್ಷಿಯು ಸಿಟಿ ಸರ್ವೆ ಎಂಟ್ರಿ ಸಲುವಾಗಿ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಅಣ್ಣ ಭಕ್ಷಿ ಪತ್ರ ಬರೆದು ಕೊಟ್ಟ ನಂತರ ಸಿಟಿಎಸ್ ದಾಖಲೆಯಲ್ಲಿ ನಿಮ್ಮ ಹೆಸರು ನಮೂದು ಆಗಿರುತ್ತದೆ ಎಂದು ಸೂಚಿಸಲಾಗಿ ಸಾಕ್ಷಿಯು ಅದಕ್ಕಿಂತ ಮುಂಚಿನಿಂದಲೂ ದಾವಾ ಆಸ್ತಿಗಳ ದಾಖಲೆಗಳಲ್ಲಿ ನಮ್ಮ ಹೆಸರು ನಮೂದು ಆಗಿತ್ತು ಎಂದು ನುಡಿಯುತ್ತಾರೆ. ನಿಪಿ-2 ರಿಂದ 4 ಮತ್ತು ನಿಪಿ-7 ರಿಂದ 9 ಇವುಗಳಲ್ಲಿ ಭಕ್ಷಿ ಪತ್ರದ ಆಧಾರದ ಮೇಲೆ ಹಕ್ಕು ಬದಲಾವಣೆ ಎಂದು ನಮೂದಿಸಿರುತ್ತಾರೆ ಎಂದು ಸೂಚಿಸಲಾಗಿ ಸಾಕ್ಷಿಯು ಮುನಿಸಿಪಲ್ ದಾಖಲೆಗಳಲ್ಲಿ ನಮ್ಮ ಹೆಸರು ಮೊದಲೇ ಇತ್ತು ಎಂದು ನುಡಿಯುತ್ತಾರೆ. ನಿಪಿ-12 ರಿಂದ 15 ಇವುಗಳಲ್ಲಿ ಭಕ್ಷಿ ಪತ್ರದ ಆಧಾರದ ಮೇಲೆ ಹಕ್ಕು ಬದಲಾವಣೆ ಎಂದು ನಮೂದಿಸಿವುದಿಲ್ಲ ಎಂದು ಸೂಚಿಸಲಾಗಿ ಸಾಕ್ಷಿಯು ಹೌ ದು ಎಂದು ನುಡಿದಿರುತ್ತಾರೆ.

ಸಿಟಿಎಸ್ ನಂಬರ 2125, 2126, 2127 ಮತ್ತು 2129 ಇವುಗಳನ್ನು ಪ್ರತಿವಾದಿ ಸಂಖ್ಯೆ 6 ರ ಹೆಸರಿಗೆ ವರ್ಗಾವಣೆ ಮಾಡಲು ದಿನಾಂಕ 05-11-1998 ರಂದು ನಾನು, ಪ್ರತಿವಾದಿ 5 ಮತ್ತು ನನ್ನ ಹಿರಿಯ ಅಣ್ಣ ನಾರಾಯಣ ಅರ್ಜಿ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಸದರಿ ಅರ್ಜಿಯ ಮೇಲೆ ನನ್ನ ಸಹಿ ಇರುತ್ತದೆ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ).

ಓ.ಹೇ.ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಧೀಶರು ಹಾಗೂ

ಪ್ರ.ದ.ನ್ಯಾದಂ. ಹಳಿಯಾಳ.